# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು 6 ಕೆರೆಗಳನ್ನು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಯನ್ನು ರಣಘಟ್ಟ pickup weir ತಿರುವಿನಿಂದ ಕೆರೆ ತುಂಬಿಸುವ ಕಾಮಗಾರಿಯ(ರಣಘಟ್ಟ ಕುಡಿಯುವ ನೀರಿನ ಯೋಜನೆ) ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

**ಓದಲಾಗಿದೆ :- 1)** ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿ /ತಾಂತ್ರಿಕ-4 /YPD-237/2019-20/2637, ದಿನಾಂಕ:14-10-2019.

2) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿ /ತಾಂತ್ರಿಕ-4 /YPD-237/2020-21, ದಿನಾಂಕ:27-10-2020.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು ಇತರೆ ಕೆರೆಗಳನ್ನು ರಣಘಟ್ಟ pickup weir ತಿರುವಿನಿಂದ ತುಂಬಿಸುವ ಕಾಮಗಾರಿಯ (ರಣಘಟ್ಟ ಕುಡಿಯುವ ನೀರಿನ ಯೋಜನೆ) ರೂ.125.46 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಕೋರಿದ್ದರು.

2. ಮೇಲೆ ಓದಲಾದ (2)ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿರುವ ಯೋಜನಾ ವರದಿಯಲ್ಲಿ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಗೆ ನೀರನ್ನು ತುಂಬಿಸುವ ಪ್ರಸ್ತಾವನೆಯೂ ಸೇರ್ಪಡೆಗೊಂಡಿದ್ದು, ಯಗಚಿ ನದಿಯಲ್ಲಿ ಹೆಚ್ಚಿನ ನೀರು ಬಂದಲ್ಲಿ ಬೇಲೂರು ತಾಲ್ಲೂಕಿನ 07 ಕೆರೆಗಳು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆ ತುಂಬಿದ ನಂತರ ಬೆಳವಾಡಿ ಕೆರೆ ಕೆಳಭಾಗದಲ್ಲಿನ ಕೆರೆಗಳಿಗೂ ಹೆಚ್ಚುವರಿ ನೀರನ್ನು ಹರಿಸಬಹುದಾಗಿರುತ್ತದೆ ಎಂಬ ಮಾಹಿತಿಯೊಂದಿಗೆ ರೂ.125.46 ಕೋಟಿಗಳ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

3. ಬೇಲೂರಿನ ಬರ ಪೀಡಿತ ಪ್ರದೇಶಗಳಲ್ಲಿ ಮತ್ತು ದ್ವಾರಸಮುದ್ರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿನ ನೀರಿನ ಅವಶ್ಯಕತೆಗಳನ್ನು ಪೂರೈಸಲು ಹಾಗೂ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಯಾವುದೇ ಶಾಶ್ವತ ನೀರಿನ ಮೂಲಗಳಿಲ್ಲದ ಪ್ರಯುಕ್ತ, ಲಭ್ಯವಿರುವ ಏಕೈಕ ಹತ್ತಿರದ ಮೂಲವೆಂದರೆ ಯಗಚಿ ನದಿ ಆಗಿರುತ್ತದೆ ಎಂದು

. . . . 2

ವರದಿಕರಿಸುತ್ತಾ, ಉದ್ದೇಶಿತ ನೀರನ್ನು ಕಾವೇರಿ ಕಣಿವೆಯಿಂದ ಕೃಷ್ಣಾ ಕಣಿವೆಗೆ ತಿರುಗಿಸಲು ಕಾರ್ಯಸಾಧ್ಯವೆಂದು ತೋರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ಅಭಿಪ್ರಾಯ ಪಟ್ಟಿರುತ್ತಾರೆ. ಸದರಿ ಯೋಜನೆಯಿಂದ ಸಣ್ಣ ನೀರಾವರಿ / ಜಿಲ್ಲಾ ಪಂಚಾಯತ್ ಇಲಾಖೆಯ 8 ಕೆರೆಗಳನ್ನು ಗುರುತ್ವ ನಾಲೆಯ ಮೂಲಕ (Gravity Open canal and closed conduit i.e. Tunnel) ದಿನಂ ಪ್ರತಿ 24 ಗಂಟೆಯಂತೆ 15 ದಿನಗಳ ಕಾಲ ಮಳೆಗಾಲದ ಸಮಯದಲ್ಲಿ ಹರಿಸಲು ಯೋಜಿಸಲಾಗಿದೆ. ಸದರಿ ಯೋಜನೆ ಅಡಿಯಲ್ಲಿ ನೀರನ್ನು ತುಂಬಲು ಉದ್ದೇಶಿಸಿರುವ ಕೆರೆಗಳ ವಿವರ ಈ ಕೆಳಕಂಡಂತಿರುತ್ತದೆ :

| ಕ್ರ. ಸಂ. | ಕೆರೆಗಳ ಹೆಸರು | ತಾಲ್ಲೂಕು | ಕೆರೆಗಳ ಸಾಮರ್ಥ್ಯ (ಎಂ.ಸಿ.ಎಫ್.ಟಿ.) |
|---|---|---|---|
| 1 | ದೇವಿಹಳ್ಳಿ ಕೆರೆ | ಬೇಲೂರು | 2.60 |
| 2 | ಪಂಡಿತನಹಳ್ಳಿ | ಬೇಲೂರು | 14.90 |
| 3 | ಮಲ್ಲಾಪುರ ಕೆರೆ | ಬೇಲೂರು | 14.00 |
| 4 | ಹರಭೀಹಳ್ಳಿ | ಬೇಲೂರು | 0.260 |
| 5 | ರಾಜಾಗೆರೆ | ಬೇಲೂರು | 0.760 |
| 6 | ದ್ವಾರಸಮುದ್ರ | ಬೇಲೂರು | 153.80 |
| 7 | ಕರಿಕಟ್ಟೆಹಳ್ಳಿ | ಬೇಲೂರು | 15.00 |
| 8 | ಬೆಳವಾಡಿ | ಚಿಕ್ಕಮಗಳೂರು | 79.50 |
| ಒಟ್ಟು :- | | | **280.82** |

3. ಕಾವೇರಿ ಜಲ ವಿವಾದದ ಅಂತಿಮ ತೀರ್ಪು ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ, ರಾಜ್ಯಕ್ಕೆ 284.75 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿದ್ದು, ಈ ಹಂಚಿಕೆಯ ಮಿತಿಯೊಳಗೆ ಸದರಿ ಯೋಜನೆಗೆ ಅವಶ್ಯವಿರುವ 280.82 ಎಂ.ಸಿ.ಎಫ್.ಟಿ. ನೀರನ್ನು ಹಂಚಿಕೆ ಮಾಡಲಾಗುವುದು. ಅಲ್ಲದೇ, ಸದರಿ ಯೋಜನೆಗೆ ಬೇಕಾಗುವ ನೀರನ್ನು ಯಗಚಿ ಅಣೆಕಟ್ಟೆಯ ಹೆಚ್ಚುವರಿ ನೀರಿನ ಹರಿವಿನಿಂದ ಬಳಸಲು ಯೋಜಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

. . . 3

4. ಸದರಿ ಪ್ರಸ್ತಾವನೆಗೆ ದಿನಾಂಕ:17-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಒಂದನೇ ಸಭೆಯಲ್ಲಿ ತೀರುವಳಿ ನೀಡಿದ್ದು, ದಿನಾಂಕ:20-09-2019 ರಂದು ನಡೆದ ನಿಗಮದ ಮಂಡಳಿಯ 70ನೇ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ರವರು ವರದಿ ಮಾಡಿರುತ್ತಾರೆ.

5 ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 42 ಎನ್ ಹೆಚ್ ಪಿ 2019,**

**ಬೆಂಗಳೂರು, ದಿನಾಂಕ:11-01-2021**

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು ಇತರೆ 6 ಕೆರೆಗಳನ್ನು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಯನ್ನು ರಣಘಟ್ಟ pickup weir ತಿರುವಿನಿಂದ ಕೆರೆ ತುಂಬಿಸುವ ಕಾಮಗಾರಿಯ (ರಣಘಟ್ಟ ಕುಡಿಯುವ ನೀರಿನ ಯೋಜನೆ) ರೂ.125.46 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಸಂಖ್ಯೆ:ಆಇ 79 ಆಕೋ-1/2019, ದಿನಾಂಕ:09.01.2020, ಹಾಗೂ ಯೋಜನಾ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಎಂಸಿಎಂ/21/2019, ದಿನಾಂಕ:12.11.2019 ರಂದು ನೀಡಿರುವ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

11/01/2021
(ಮನೋಹರ ವೈ. ರೊಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ :-**

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.

. . . . 4

2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-684/2020, ದಿನಾಂಕ:28-12-2020).
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.